ಓ.ಎಸ್. ನಂಃ 487/2022
ಪಿ.ಡಬ್ಲ್ಯೂ-2 (ಪುಂಡಲೀಕ)

ದಿನಾಂಕ: 12-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 1 ರಿಂದ 5 ರವರ ಪರ ವಕೀಲರಿಂದಃ**

ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ನೋಟೀಸು ಬಂದಿಲ್ಲ. ನಾನು ಇಂದು ನ್ಯಾಯಾಲಯಕ್ಕೆ ವಾದಿಯ ಜೊತೆ ಬಂದಿರುತ್ತೇನೆ. ವಾದಿ ನನ್ನ ಸಂಬಂಧಿಕರು ಇರುತ್ತಾರೆ. ನಾನು ಚಿಕ್ಕವನಿದ್ದಾಗಿನಿಂದ ನನಗೆ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದೆ.

2. ದಾವಾ ಆಸ್ತಿಯ ಕುರಿತು ಮಾತುಕತೆಯು ವಾದಿಯರ ತೋಟದಲ್ಲಿ 2017 ರ ಕೊನೆಯಲ್ಲಿ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ದಾವಾ ಆಸ್ತಿ ನೀರಾವರಿ ಜಮೀನು ಎಂದರೆ ಈಗ 03 ವರ್ಷಗಳಿಂದ ನೀರಾವರಿ ಜಮೀನು ಆಗಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮಾತುಕತೆಯ ಸಮಯದಲ್ಲಿ ನಾನು ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ. ಆಗ ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಯುತ್ತಾರೆ ಮತ್ತು ಕಾಲುವೆಯಿಂದ ನೀರಾವರಿ ಸೌಲಭ್ಯ ಇದೆ ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಕಬ್ಬು, ಗೋವಿನ ಜೋಳ, ಹತ್ತಿ ಬೆಳೆಯುತ್ತಾರೆ ಎಂದರೆ ಜೋಳ ಬೆಳೆಯುತ್ತಿದ್ದರು ಎಂದು ಹೇಳುತ್ತಾರೆ.

3. ಮಾತುಕತೆ ಆದ ಸಮಯದಲ್ಲಿ ಮನ್ನಿಕೇರಿ ಗ್ರಾಮದಲ್ಲಿ 01ಎಕರೆ ಜಮೀನಿಗೆ ರೂ.15,00,000/- ರಿಂದ ರೂ.20,00,000/- ಬೆಲೆ ಇತ್ತು ಎಂದರೆ ಸರಿಯಲ್ಲ. ಆಗ ಎಕರೆಗೆ ರೂ.7,00,000/- ರಿಂದ ರೂ.8,00,000/- ಬೆಲೆ ಇತ್ತು.

4. ದಾವಾ ಆಸ್ತಿ ಕುರಿತು ಮಾತುಕತೆ ಬೆಳಿಗ್ಗೆ 10.00 ಗಂಟೆಯಿಂದ 11.30 ಗಂಟೆಯವರೆಗು ನಡೆದಿರುತ್ತದೆ. ಮಾತುಕತೆ ಆದ ದಿನ ರೂ.4,00,000/- ಮುಂಗಡವಾಗಿ ಕೊಟ್ಟಿರುತ್ತಾರೆ. ವಾದಿ ಪ್ರತಿವಾದಿಯರಿಗೆ ರೂ.4,00,000/- ಕೊಟ್ಟ ಬಗ್ಗೆ ಪ್ರತಿವಾದಿಯರಿಂದ ಯಾವುದೇ ರಸೀದಿ ಪಡೆದಿಲ್ಲ. ಪ್ರತಿವಾದಿಯರಿಂದ ರೂ.4,00,000/- ತಲುಪಿದ ಬಗ್ಗೆ ಯಾವುದೇ ದಾಖಲೆ ಬರೆಯಿಸಿಕೊಳ್ಳಲು ನಮಗೆ ತೊಂದರೆ ಇರಲಿಲ್ಲ. ಮಾತುಕತೆಯಾದ 01 ವರ್ಷದ ನಂತರ ಖರೀದಿ ಕರಾರ ಪತ್ರ ಮಾಡಿಕೊಂಡಿರುತ್ತಾರೆ. ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿ ಮಾಡಿಕೊಳ್ಳಲು 01 ವರ್ಷ ಸಮಯ ತೆಗೆದುಕೊಳ್ಳಲಾಗಿತ್ತು.

5. ಮಾತುಕತೆಯಾದ ಪ್ರಕಾರ 04ಗುಂಟೆ ಮತ್ತು 11ಗುಂಟೆ ಜಮೀನನ್ನು ವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.121/1 ಹಾಗೂ 121/2 ಈ ಜಮೀನುಗಳ ವ್ಯವಹಾರ ಆಗುವಾಗಲೂ ಸಹ ನಾನು ಹಿರಿಯನಾಗಿ ಆ ವ್ಯವಹಾರದಲ್ಲಿ ಭಾಗವಹಿಸಿದ್ದೆ ಎಂದರೆ ಸರಿಯಲ್ಲ.

6. ಖರೀದಿ ಕರಾರ ಪತ್ರ ಬರೆಯಿಸಿಕೊಳ್ಳಲು ಗೋಕಾಕಗೆ ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಬಂದಿರುತ್ತೇವೆ. ಖರೀದಿ ಕರಾರ ಪತ್ರಕ್ಕೆ ಹಿರಿಯರು ಮತ್ತು ಪ್ರತಿವಾದಿ 1 ಮತ್ತು 2 ಮಾಹಿತಿ ಕೊಟ್ಟು ಬರೆಯಿಸಿರುತ್ತಾರೆ. ಆ ದಿವಸ ಒಂದು ದಾಖಲೆ ಬರೆಯಿಸಲಾಗಿದೆ. ನಾನು ಒಂದು ದಾಖಲೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಬೀರನ್ನವರ ನೋಟರಿಯವರ ಸಮ್ಮುಖದಲ್ಲಿ ಒಂದು ದಾಖಲೆ ಆಗಿದ್ದು ಆ ದಾಖಲೆಗು ಸಹ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-1ಕ್ಕೆ ನನ್ನ ಜೊತೆ ತಮ್ಮಣ್ಣಾ ದಾಸನಾಳ ಎನ್ನುವವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಬೀರನ್ನವರ ನೋಟರಿಯವರ ಮುಂದೆ ಆದ ದಾಖಲೆಗು ಸಹ ತಮ್ಮಣ್ಣಾ ದಾಸನಾಳ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ.

7. ದಾವಾ ಆಸ್ತಿ ಪ್ರತಿವಾದಿ 1 ಮತ್ತು 2 ರವರಿಗೆ ಯಾವ ನಾತೆಯಿಂದ ಬಂದಿರುತ್ತದೆಂದು ನಾನು ಮತ್ತು ಇತರೇ ಹಿರಿಯರು ವಿಚಾರಿಸಿಲ್ಲ. ಸದರಿ ಮಾತುಕತೆ ಆಗುವ ಸಮಯದಲ್ಲಿ ಪ್ರತಿವಾದಿ 1 ಮತ್ತು 2 ರವರನ್ನು ಅವರ ಅಣ್ಣ ತಮ್ಮ ಮತ್ತು ಅಕ್ಕ ತಂಗಿಯರ ನಡುವೆ ವಾಟ್ನಿ ಆಗಿದೆಯೋ ಇಲ್ಲವೊ ವಿಚಾರಿಸಿದಾಗ ಇನ್ನೂ ವಾಟ್ನಿ ಅಗಿಲ್ಲ ವಾಟ್ನಿ ಮಾಡಿಕೊಡುತ್ತೇವೆ ಎಂದು ಹೇಳಿರುತ್ತಾರೆ. ಖರೀದಿ ವ್ಯವಹಾರ ಆದಾಗ ದಾವಾ ಅಸ್ತಿಯು ಕೂಡು ಕುಟುಂಬದ ಆಸ್ತಿಯಾಗಿತ್ತು ಎಂದರೆ ಸರಿ.

8. ಖರೀದಿ ಕರಾರ ಪತ್ರ ನೋಂದಣಿಯಾದ ನಂತರ ವಾದಿ ಪ್ರತಿವಾದಿಯರಿಗೆ ರೂ.2,50,000/- ಕೊಟ್ಟಿರುತ್ತಾರೆ. ಸದರಿ ದುಡ್ಡು ಉಪ-ನೋಂದಣಿ ಅಧಿಕಾರಿಗಳ ಕಚೇರಿಯಿಂದ ಹೊರಗೆ ಬಂದು ಕೊಟ್ಟಿರುತ್ತೇವೆ.

9. ನಾನು ವ್ಯವಹಾರದಲ್ಲಿ ಹಿರಿಯನಾಗಿದ್ದರಿಂದ ವಾದಿ ನನಗೆ ತಾವು ಸುಮಾರು ಬಾರಿ ಖರೀದಿ ಪತ್ರ ಬರೆದುಕೊಡಲು ಕೇಳಿದ್ದರೂ ಸಹ ಖರೀದಿ ಪತ್ರ ಬರೆದುಕೊಟ್ಟಿಲ್ಲ ಎಂದು ಹೇಳಿರುತ್ತಾರೆ. ನಾನು ಹೇಳಿದ ಪ್ರಕಾರ ಸರ್ವೆ ನಂ.127/1ಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ಹಿರಿಯರು ಸೇರಿದಾಗ ಸರ್ವೆ ನಂ.121/1, 121/2, 122/1 ಮತ್ತು 122/2 ಈ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಸರ್ವೆ ನಂ.121/1, 121/2, 122/1 ಮತ್ತು 122/2 ರ ದಾಖಲೆಗಳು ಸರಿ ಆಗುವವರೆಗು ಎಂದು ಹೇಳಿ ನಿಪಿ-1ನ್ನು ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿ ನಮ್ಮ ಸಂಬಂಧಿಕರಾಗಿದ್ದು ಅವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ಯಾವುದೇ ವ್ಯವಹಾರ ಆಗಿಲ್ಲ ಬೇರೆ ಆಸ್ತಿಗೆ ವ್ಯವಹಾರ ಆಗಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1ನ್ನು ಹೊರತುಪಡಿಸಿ ನಾನು ಬೇರೆ ದಾಖಲೆಗಳಿಗೆ ಸಹಿ ಮಾಡಿಲ್ಲ. ನಾನು ಸಾಕಷ್ಟು ಕಾಗದಗಳಿಗೆ

ಸಾಕ್ಷಿಯಾಗಿ ಸಹಿ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ